‘ಮೊದ್ಲು ನಮ್ಮನೆ ಅಂಗ್ಳದಿಂದ ಆಚೆ ನಿಂತ್ಕ ಮಾತಾಡ ಬೇವರ್ಸಿ!’

ಗುಡುಗೊಂದು ಮೈಕಿನಲ್ಲಿ ಗುಡುಗಿದಂತೆ ಅಬ್ಬರಿಸುತ್ತಲೇ ಒಳಗಿನಿಂದ ಬಂದ ನೇಮು. ಸೆಕೆಗೆ ಅಂಗಿ ಕಳಚಿ ನಿಂತಿದ್ದವನ ಆರಡಿ ಎತ್ತರದ ಕಪ್ಪು ದೇಹ ಸಂಜೆಯ ಬೆಳಕಿಗೆ ಮಿರಮಿರ ಹೊಳೆಯುತ್ತಿತ್ತು.

ಬದುಕಿನುದ್ದಕ್ಕೂ ಹೂಡುತ್ತಿದ್ದ ಬಾಣವೊಂದು ಮೊದಲ ಬಾರಿಗೆ ತನ್ನ ಮೇಲೇ ಪ್ರಯೋಗವಾದಂತೆ ಭಾಸವಾಯಿತು ಖುತುರಾಜನಿಗೆ.

‘ಸಾರ್ವಜನಿಕ ರಸ್ತೆಗ್ ಹಾಕಿದ್ ದಣಪೆ ಮುರೂಕೆ ಯಾರಪ್ಪನ್ ಯಾಕ್ ಕೇಳ್ಬೇಕಲೇ? ನಮ್ಮನೆ ತೋಟಕ್ಕೆ ಗೊಬ್ರ ಮಣ್ಣು ಹೊಡೂಕಿತ್. ಅದ್ಕೇ ಉಣ್ಗೋಲು ಕಿತ್ತೆ. ಮಧ್ಯದಲ್ಲಿ ನಿಂದೆಂತ?’

‘ಕಿತ್ ಬಿಸಾಕೂಕೆ ಅದು ನಿಮ್ಮಪ್ಪ ಕಟ್ಟಿದ್ದಲ್ಲ. ನಾನು ಕಷ್ಟ ಪಟ್ಟಿ ಕಟ್ಟಿದ್ದು! ಯಾವನ ಹೇಳಿದ್ದು ಸರ್ಕಾರೀ ಜಾಗ ಅಂತ? ನನ್ ಜಾಗ ಅದು! ಅಲ್ಲಿ ನಾ ಬೇಲಿನಾರೂ ಹಾಯ್ಕಂತೆ, ಬಿಲ್ಡಿಂಗಾರೂ ಕಟ್ಟಿಸ್ತೆ. ಅದ್ನ ಕೇಳೂಕೆ ನೀಯಾವೂರ್ ಭಿಕಾರೀನ?’

‘ಮಗ್ನೇ... ನಾಲ್ಗೆ ಮೇಲೆ ನಿಗಾ ಇರ್ಲಿ. ಬೇಲಿ ಹಾಕಿದ್ ಕೂಡ್ಲೇ ತನ್ ಜಾಗಾನಾ ನಿಂಗೆ ಬಿಟ್ಕೊಡೂಕೆ ನನ್ನೇನ್ ಎಂಪಿಎಂನೋರು ಅಂದ್ಕಂಡ್ಯಾ? ನೀ ಹಿಂಗ್ ತೋಳ್ ಮಡಸ್ಕಂಡ್ ಬಂದ್ಕೂಡ್ಲೇ ಹೆದ್ರಿ ನಡ್ಗೂಕೆ ನಾನು ಮೇಷ್ಟ್ರೋ, ಅವ್ರ ಮಗ್ನೋ ಅಲ್ಲ. ಇನ್ನೊಂದ್ ಮಾತು ಹೆಚ್ಗೆ ಆಡ್ರೂ ನಿನ್ನಿಲ್ಲೇ ಹುಗಿತೇ ಮಗ್ನೇ’



ಖುತುರಾಜನಿಗೆ ಪಿತ್ತ ಕೆದರಿತು. ತೋಳು ಮಡಿಸಿಕೊಂಡು ನಡೆದೇ ಬಿಟ್ಟ. ಜೀತುವನ್ನು ಕೆಡವಿದಂತೆಯೇ ನೇಮುವನ್ನೂ ಕೊರಳ ಪಟ್ಟಿ ಹಿಡಿದು ನೆಲಕ್ಕೆ ಕೆಡವಲೆಂದು ಶರ್ಟಿಗೆ ಕೈ ಹಾಕಿದ. ಆದರೆ ನೇಮು ದುಪ್ಪಟ್ಟು ಬಲದಲ್ಲಿ ಅವನ ಕೈಗೆ ಬಡಿದ. ಖುತುರಾಜನನ್ನು ಅನಾಮತ್ತಾಗಿ ಆಚೆಗೆ ತಿರುಗಿಸಿ ಬೆನ್ನ ಮೇಲೆ ಒದ್ದ. ಅವನ ಬಲಶಾಲಿ ಕಾಲುಗಳು ಖುತುರಾಜನ ಹೊಟ್ಟೆ, ಡೊಕ್ಕೆ, ಕಾಲುಗಳ ಮೇಲೆಲ್ಲಾ ಅಪ್ಪಳಿಸಿ ಅಪ್ಪಳಿಸಿ ಹಿಂದಿರುಗಿದವು.

ಕೆಲವೇ ನಿಮಿಷದಲ್ಲಿ ಖುತುರಾಜ ಕಿತ್ತು ಬಿಸಾಕಿದ ದಣಪೆಯಂತೆ ನೆಲಕ್ಕೆ ಬಿದ್ದ.

* * *

‘ಜಗದೀಶರೊಬ್ಬರು ಗೆಲ್ಲಲಿ. ಈ ನನ್ಮಗನ್ನ ಆಗ ನೋಡ್ಕಂತೆ!’

ಬಡಿಸಿಕೊಂಡ ತೋಳದಂತೆ ಆಚೀಚೆ ಶತಪಥ ಹಾಕುತ್ತ ಗುರುಗುಟ್ಟಿದ ಖುತುರಾಜ. ಮೇಷ್ಟ್ರ ಹಾಗೂ ಅವನ ನಸುಗುನ್ನಿ ಮಗ ಬೇಕಂತಲೇ ಈ ಕಿರಿಕ್ ನೇಮುವಿಗೆ ತಮ್ಮ ಆಸ್ತಿಯನ್ನು ಮಾರಿ ಹೋಗಿದ್ದಾರೆಂದು ಅವನಿಗೆ ಆಗಷ್ಟೇ ಅರ್ಥವಾಗಿತ್ತು. ತಮ್ಮಂಥದೇ ಪಾಪದ ಕುರಿಗಳು ಹಲವರು ಬಂದರೂ ಅವರಿಗ್ಯಾರಿಗೂ ಮಾರದೇ ಬಲಶಾಲಿ ನೇಮುವಿನಂಥವನಿಗಾಗಿ ಕಾದರಲ್ಲ! ತೋಳಿನಿಂದ ಆಗದ್ದನ್ನು ತಲೆಯಿಂದ ಸಾಧಿಸಿದರು ನಸ್ಗೂನಿಗಳು!

ಆ ದಿನ ಚುನಾವಣ ಫಲಿತಾಂಶ ಬರುವುದರಲ್ಲಿತ್ತು. ಮತ ಎಣಿಕೆ ಭರದಿಂದ ಸಾಗಿತ್ತು. ಮೊದಲ ಹಂತದಲ್ಲೇ ಜಗದೀಶರು ಮುನ್ನಡೆ ಸಾಧಿಸಿದ್ದರು. ಜನಹಿತ ಪಕ್ಷದ ಸಂಪಾತಿಗೂ ಅವರಿಗೂ ಸ್ಪರ್ಧೆ ಸರಿಸಮಾನವಾಗಿ ಸಾಗಿತ್ತಾದರೂ ಎಣಿಕೆ ಬಾಕಿ ಉಳಿದ ಕ್ಷೇತ್ರಗಳ ಹೆಸರು ನೋಡಿದರೆ ಜಗದೀಶರು ಗೆಲ್ಲುವುದು ಖಾತ್ರಿ ಎಂಬಂತಿತ್ತು. ಅವರ ಗೆಲುವಿಗೆ ಪ್ರತಿಯಾಗಿ ತಾನು ಕೇಳುವ ಮೊದಲ ಉಡುಗೊರೆಯೇ ಈ ನೇಮುವಿನ ಮುರಿದ ಡೊಕ್ಕೆ ಎಂದುಕೊಳ್ಳುತ್ತ ಖುತು ಫಲಿತಾಂಶ ಘೋಷಣೆಯಾಗುವುದನ್ನೇ ಕಾದ.

‘ರೋಚಕ ಹಣಾಹಣಿ ಕಂಡ